ದಿನಾಂಕಃ 26.03.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

## ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ.ಹೆಚ್.ವಿ.ಎಂ. ವಕೀಲರಿಂದಃ

ನಾನು ಬಿ.ಕಾಂ ವರೆಗೂ ವ್ಯಾಸಾಂಗ ಮಾಡಿರುತ್ತೇನೆ. ದಾವಾ ಆಸ್ತಿಯು ನನ್ನ ಹೆಂಡತಿ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿಯು ನನ್ನ ಹೆಂಡತಿ/1 ನೇ ವಾದಿಗೆ ಅವರ ತಾಯಿಯ ಮೂಲಕ ಬಂದಿರುತ್ತದೆ. ಸದರಿ ದಾವಾ ಆಸ್ತಿಯ ಮೇಲೆ ಐ.ಡಿ.ಬಿ.ಐ. ಬ್ಯಾಂಕಿನಿಂದ ಸಾಲ ಪಡೆಯಲಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗೆ ದಾವಾ ಆಸ್ತಿಯನ್ನು ಹಿಂದಿನ ಮಾರುಕಟ್ಟೆ ಮೌಲ್ಯದಂತೆ ಮಾರಾಟ ಮಾಡುವ ಉದ್ದೇಶದಿಂದ ಮಾರಾಟ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ವಿಚಾರವಾಗಿ ಸ್ಟಾಂಪ್ ಪೇಪರಗಳನ್ನು ಮೈಸೂರಿನಲ್ಲಿ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ಖರೀದಿ ಮಾಡಿದ 1 ತಿಂಗಳಾದ ನಂತರ ಉಪನೋಂದಣಾಧಿಕಾರಿ ಕಚೇರಿಯ ಬಳಿ ಪ್ರತಿವಾದಿಗಳಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಡಲಾಗಿರುತ್ತದೆ ಎಂದರೆ ಸರಿ. ವ್ಯವಹಾರ ಆದ ನಂತರವೇ ಹಣವನ್ನು ಪಡೆದು ಸದರಿ ದಿನವೇ ಪ್ರತಿವಾದಿಗೆ ಸ್ವಾಧೀವನ್ನು ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವ್ಯಾಪಾರವು ಸ್ವಾಧೀನತೆ ಪಡೆಯಲು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ದಾವಾ ಸ್ವತ್ತಿನ ವಿಚಾರವಾಗಿ ಐಕನಹಳ್ಳಿ ಲೋಕೇಶ್ ಎನ್ನುವವರ ಜೊತೆ ಸಹ ವ್ಯವಹಾರ ಆಗಿರುತ್ತದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸದರಿ ವ್ಯವಹಾರವು ಮುಕ್ತಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ವ್ಯವಹಾರ ಆದ ನಂತರ ದಾವಾ ಆಸ್ತಿಯ ಸ್ವಾಧೀನತೆಯನ್ನು ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿ. ಅದರಂತೆ ಪ್ರತಿವಾದಿ ಸ್ವಾಧೀನ ಪಡೆದು ದಾವಾ ಆಸ್ತಿಯನ್ನು ಅಭಿವೃದ್ಧಿ ಮಾಡಿ ಕಬ್ಬು ಹಾಗೂ ಇತರೆ ಬೆಳೆಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವ್ಯವಹಾರವು ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ಅನುಗುಣವಾಗಿ ಕ್ರಯದ ಕರಾರು ಪತ್ರವನ್ನು ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರವನ್ನು ರೂ. 6,00,000/- ಗಳಿಗೆ ಮಾಡಿ ರೂ. 5,00,000/- ಪಡೆದು ಉಳಿದ ಹಣವನ್ನು ನೋಂದಣಿ ಮಾಡಿಸುವ ಸಮಯದಲ್ಲಿ ನೀಡುವುದಾಗಿ ಮಾತುಕತೆ ಆಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ರೂ. 36,25,000/- ಗಳಿಗೆ ಮಾತುಕತೆ ಆಗಿದ್ದು ನಂಬಿಕೆ ಮೇರೆಗೆ ರೂ. 6,00,000/- ಕ್ಕೆ ಒಪ್ಪಿ ವ್ಯವಹಾರ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿರ್ದಿಷ್ಟ ಕರಾರು ಪತ್ರವನ್ನು ಬರೆದು ಕೊಡಲು ಪ್ರತಿವಾದಿ ಹಿರಿಯ ಶ್ರೇಣಿ ನ್ಯಾಯಾಲಯದ ಮುಂದೆ ದಾವಾ ದಾಖಲು ಮಾಡಿರುವ ಬಗ್ಗೆ ನನಗೆ ಗೊತ್ತಿರುತ್ತದೆ.

ಮೌಖಿಕವಾಗಿ ವಾದಿಗೆ ಪತ್ರ ಬರೆದುಕೊಡಲು ಪ್ರತಿವಾದಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನೊಂದಾಯತಿವಲ್ಲದ ಕ್ರಯಪತ್ರವನ್ನು ಮಾಡಿಸಿ, ದಾವಾ ಆಸ್ತಿಯ ಮೌಲ್ಯ ಹೆಚ್ಚಾಗಿರುವ ಕಾರಣ ಪ್ರತಿವಾದಿಯನ್ನು ದಾವಾ ಸ್ವತ್ತಿನಿಂದ ಹೊರಗಡೆ ಹಾಕಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ ಸ್ವಾಧೀನ ಹೊಂದಿದ್ದ ಸಂದರ್ಭದಲ್ಲಿ ಬೆಳೆಗಳನ್ನು ಬೆಳೆಸಿದ್ದು ಹಾಗೂ ನ್ಯಾಯಾಲಯದಿಂದ ಆದೇಶ ಪಡೆದು ಪ್ರತಿವಾದಿಯನ್ನು ಹೊರಗಡೆ ಹಾಕಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಭಿವೃದ್ಧಿ ಮಾಡಿದ ವಿಚಾರವಾಗಿ ಪ್ರತಿವಾದಿಗೆ ಹಣ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ಪ್ರತಿವಾದಿಯು ಬೆಳೆಗಳನ್ನು ಬೆಳೆಸಿದ್ದು ಸಾಕ್ಷಿಯಾಗಿ ಸಹಿ ಹಾಕಿರುವ ನೀಲಕಂಠಪ್ಪ ರವರಿಂದ ಕಟಾವು ಮಾಡಿಲಸಗಿದೆ ಎಂದರೆ ಸರಿಯಲ್ಲ. ನೀಲಕಂಠಪ್ಪನವರಿಗೆ ಮಾರಾಟ ಮಾಡಲು ಪ್ರತಿವಾದಿಯನ್ನು ಸ್ವಾಧೀನತೆಯಿಂದ ಹೊರಹಾಕಲಾಗಿದೆಎಂದೆರ ಸರಿಯಲ್ಲ.ದಿನಾಂಕ 25.11.2019 ರಂದು ಸ್ವತಃ ನಾವೇ ಪ್ರತಿವಾದಿಗಳನ್ನು ದಾವಾ ಸ್ವತ್ತಿನಿದಿ ಹೊರತಳ್ಳಿ ಸ್ವಾಧಿನ ಪಡೆಂದುಕೊಂಡಿರುತ್ತೇವೆ ಎಂದರೆ ಸರಿಯಲ್ಲ, ನ್ಯಾಯಲಾಯದ ಆದೇಶದ ಪಡೆಯಲಾಗಿರುತ್ತದೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶವಾಗುವವರೆಗೂ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದರು ಎಂದರೆ ಸರಿ. ನ್ಯಾಯಾಲಯದ ಆದೇಶ ಪಡೆದು ಪ್ರತಿವಾದಿಗಳನ್ನು ದಾವಾ ಆಸ್ತಿಯಿಂದ ಖಾಲಿ ಮಾಡಿಸಲಾಗಿರುತ್ತೆ ಎಂದರೆ ಸರಿ. ನ್ಯಾಯಾಲಯದ ಆದೇಶಕ್ಕೆ ಗೌರವ ನೀಡಿ ಪ್ರತಿವಾದಿಗಳು ಸ್ವಾಧೀನ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೊಲೀಸ ಠಾಣೆಗೂ ಸಹ ಹೋಗಿರುತ್ತೆವೆ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಗೆ ನೀಡಿರುವ ದೂರನ್ನು ದಾಖಲು ಮಾಡಿರುವುದಿಲ್ಲ. ದೂರು ನೀಡಿದ ದಿನಾಂಕ ನೆನಪಿರುದಿಲ್ಲ. ಪ್ರತಿವಾದಿಗಳು ಯಾವುದೇ ರೀತಿ ತೊಂದರೆ ನೀಡಿರುವುದಿಲ್ಲ, ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.